ಮನೆಗಳಲ್ಲಿ ಏಕಾಂಗಿಯಾಗಿರುವವರಿಗೆ ಒಬ್ಬರೇ ಇದ್ದೂಇದ್ದೂ ಬೋರ್ ಆಗಿದೆ. ಜೊತೆಯವರನ್ನು ಮಿಸ್ ಮಾಡಿಕೊಳ್ತಿದ್ದೀನಿ ಎಂಬ ಬೇಸರವೂ ಕಾಡುತ್ತಿದೆ. ಏನಾದ್ರೂ ಚಟುವಟಿಕೆ ಮಾಡಬೇಕು, ಅದು ಹತ್ತು ಜನರಿಗೆ ಇಷ್ಟವಾಗಬೇಕು, ನಮ್ಮವರೊಂದಿಗೆ ಗುರುತಿಸಿಕೊಳ್ಳಬೇಕು ಎಂಬ ತುಡಿತವೂ ಇದೆ. ಈ ಎಲ್ಲವನ್ನೂ ಈಡೇರಿಸಲು ಸುಲಭದ ದಾರಿಯಾಗಿ ಒದಗಿ ಬಂದಿದ್ದು ಸೋಷಿಯಲ್ ಮೀಡಿಯಾ ಚಾಲೆಂಜ್‌ಗಳು.

ಕಳೆದ ಒಂದು ತಿಂಗಳ ಅವಧಿಯಲ್ಲಿ ಬಂದು ಹೋದ, ಈಗಲೂ ಚಾಲ್ತಿಯಲ್ಲಿರುವ ಚಾಲೆಂಜ್‌ಗಳ ಪಟ್ಟಿಯ ಮೇಲೊಮ್ಮೆ ಕಣ್ಣು ಹಾಯಿಸಿ. ಪಿಲ್ಲೊ ಚಾಲೆಂಜ್, ಸ್ಯಾರಿ ಚಾಲೆಂಜ್, ಕಪಲ್ ಚಾಲೆಂಜ್, ಸ್ಟೇ ಹೋಂ–ಸ್ಟೇ ಸೇಫ್, ಬುಕ್ ಕವರ್, ಬೆಸ್ಟ್ ಪಾರ್ಟ್ ಆಫ್ ಮಿ, ವಿತ್ ಕಿಡ್, ವಿತ್ ಡಾಟರ್, ವಿತ್ ಮೈ ಚೈಲ್ಡ್, ಬೆಸ್ಟ್ ಪಾರ್ಟ್ ಆಫ್ ಮಿ, ವೇರ್ ವಿ ಮೆಟ್ ಫಸ್ಟ್, ಇಮೋಜಿ ರೈಟಿಂಗ್... ಹೀಗೆ ಈ ಪಟ್ಟಿ ಇನ್ನೂ ಬೆಳೆಯುತ್ತೆ.

ಮೇಲ್ನೋಟಕ್ಕೆ ಕಾಲಯಾಪನೆ (ಟೈಂ ಪಾಸ್) ಮತ್ತು ಖುಷಿಯೇ (ಫನ್) ಈ ಚಾಲೆಂಜ್‌ಗಳ ಮುಖ್ಯ ಉದ್ದೇಶ ಎಂದುಕೊಂಡರೂ ಅದರ ಹಿಂದೆ ಕೆಲಸ ಮಾಡುತ್ತಿದ್ದುದು ಮಲ್ಟಿಲೆವೆಲ್ ಮಾರ್ಕೆಟಿಂಗ್ ಎಂಬ ಬಹುಸ್ತರಗಳಲ್ಲಿ ಉತ್ಪನ್ನ ಅಥವಾ ಐಡಿಯಾ ಮಾರುವ ಮಾರುಕಟ್ಟೆ ತಂತ್ರ.



### #FliptheSwitch
### w(ನಿನ್ನ ಉಡುಪು ನನ್ನದು, ನನ್ನ ಉಡುಪು ನಿನ್ನದು)

ಕಳೆದ ತಿಂಗಳ ಆರಂಭದಲ್ಲಿ ಹರಿದಾಡಿದ ಜನಪ್ರಿಯ ಚಾಲೆಂಜ್ ಇದು. 'ಐ ಜಸ್ಟ್ ಫ್ಲಿಪ್ಡ್ ದ ಸ್ವಿಚ್' ಹಾಡಿನ ಸಾಹಿತ್ಯಕ್ಕೆ ಡಾನ್ಸ್ ಮಾಡುವುದು ಟಿಕ್‌ಟಾಕ್‌ನಲ್ಲಿ ಎರ್ರಾಬಿರ್ರಿ ವೈರಲ್ ಆಗಿತ್ತು. ಕ್ರಮೇಣ ಇನ್‌ಸ್ಟಾಗ್ರಾಮ್, ಟ್ವಿಟರ್, ಫೇಸ್‌ಬುಕ್‌ನಲ್ಲಿಯೂ ವಿಡಿಯೊಗಳು ಕಾಣಿಸಿಕೊಂಡವು. ಹೆಣ್ಣು ಮತ್ತು ಗಂಡು ಜೊತೆಗೂಡಿ ಡಾನ್ಸ್ ಮಾಡುತ್ತಾ, ಅರೆ ಸೆಕೆಂಡ್‌ನಲ್ಲಿ ಉಡುಪು ಅದಲುಬದಲು ಮಾಡಿಕೊಳ್ಳುವುದು ಈ ಚಾಲೆಂಜ್‌ನ ಮುಖ್ಯ ಅಂಶ.

### #DontRushChallenge (ಚಂದಕಿಂತ ಚಂದ)

ಬ್ರಿಟನ್‌ನ ಹಿಪ್‌ಹಾಪ್ ಕಲಾವಿದರಾದ ಯಂಗ್–ಟಿ ಮತ್ತು ಬಗ್ಸೆ ಹೆಣೆದ ಹಾಡಿನ ಹಿನ್ನೆಲೆಯಲ್ಲಿ ರೂಪುಗೊಂಡ ಚಾಲೆಂಜ್ ಇದು. ಆರಂಭದಲ್ಲಿ ಒಬ್ಬರು ಮೇಕಪ್ ಮಾಡಿಕೊಂಡು ಮೇಕಪ್ ಬ್ರಷ್ ಅನ್ನು ಕ್ಯಾಮೆರಾ ಮೇಲೆ ಆಡಿಸುತ್ತಾರೆ. ಆಗ ಹುಟ್ಟಿಕೊಳ್ಳುವ ಕತ್ತಲು ಹರಿಯುವ ಹೊತ್ತಿಗೆ ಅಲ್ಲಿ ಮತ್ತೊಬ್ಬರಿರುತ್ತಾರೆ. ಅವರು ಮತ್ತೊಬ್ಬರಿಗೆ ಬ್ರಷ್ ವರ್ಗಾಯಿಸುತ್ತಿರುತ್ತಾರೆ. ಅಮೆರಿಕದ ನ್ಯೂ ಒರ್ಲಿಯನ್ಸ್ ನಗರದ ಪೊಲೀಸ್ ಅಧಿಕಾರಿಗಳು ಮೇಕಪ್ ಬ್ರಷ್ ಬದಲು ಟೋಪಿಯನ್ನು ವರ್ಗಾಯಿಸುವ ಮೂಲಕ ಮಾಡಿದ ಪ್ರಯೋಗ ಹಲವರ ಮೆಚ್ಚುಗೆಗೆ ಪಾತ್ರವಾಗಿತ್ತು. ಹತ್ತಾರು ಬಗೆಯಲ್ಲಿ ಈ ಚಾಲೆಂಜ್ ಇಂದಿಗೂ ಓಡಾಡುತ್ತಿದೆ.

